## 13. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾವುಗೊಲ್ಲರ ಕ್ಯಾಂಪ್, ಭದ್ರಾವತಿ ತಾ

"ದೇಶದ ಭವಿಷ್ಯ ನಿರ್ಮಾಣವಾಗುವುದು ಶಾಲಾ ಕೊಠಡಿಗಳಲ್ಲಿ" ಎಂಬ ಉಕ್ತಿ ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ. ಅದು ಸದಾ ಹರಿಯುವ ನೀರಿನಂತೆ ಶಿಕ್ಷಣದ ಪ್ರಕ್ರಿಯೆಯಲ್ಲಿ ಆವಿಷ್ಕಾರಗಳು ಜರುಗುತ್ತಲೇ ಇರುತ್ತವೆ. ಅಂತಹ ಸೃಜನಶೀಲ ಚಟುವಟಿಕೆಗಳು ಮತ್ತು ಹೊಸ ಆವಿಷ್ಕಾರಗಳ ಮೂಲಕ ಮಕ್ಕಳ ಕಲಿಕೆಗೆ ನೆರವಾಗಲು ನೂತನ ಕಲಿಕಾ ಯೋಜನೆಗಳನ್ನು ರೂಪಿಸಿ ಕಲಿಕೆಯಲ್ಲಿ ತೊಡಗಿರುವ ಶಾಲೆಗಳಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾವುಗೊಲ್ಲರ ಕ್ಯಾಂಪ್ ಸಹ ಒಂದಾಗಿದೆ.



ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹಾವುಗೊಲ್ಲರ ಕ್ಯಾಂಪ್, ಇದು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿಗೆ ಸೇರಿದೆ. ಇದು ಭದ್ರಾವತಿಯಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿರುವ ಗ್ರಾಮವಾಗಿದೆ. ಇಲ್ಲಿಗೆ ಯಾವುದೇ ವಾಹನ ಸೌಲಭ್ಯವಿಲ್ಲ ಇಲ್ಲಿನ ಜನ ಮೂಲ ತಮಿಳುನಾಡಿನಿಂದ ವಲಸೆ ಬಂದವರಾಗಿದ್ದಾರೆ.ಇವರ ಮಾತೃಭಾಷೆ ತಮಿಳು, ಈಗಲೂ ಸಹ ಇವರು ವರ್ಷದ ಕೆಲವು ತಿಂಗಳು ವಲಸೆ ಹೋಗುತ್ತಾರೆ ಕಾರಣ ಹೊಟ್ಟೆಪಾಡಿಗಾಗಿ ಇವರು ದೂರದ ನದಿ ತೀರಗಳಲ್ಲಿ ಮರಳು ಜಾಲಿಸಿ ಸಿಗುವ ವಸ್ತುಗಳನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಇಂತಹ ಕುಗ್ರಾಮಕ್ಕೆ ಶಾಲೆ ಬಂದದ್ದು ನಿಜವಾಗಿಯೂ ಅವರ ಉನ್ನತಿಯ ಮಾರ್ಗದಂತಿದೆ ಹಾಗೂ ಅಲ್ಲಿನ ಪುಟ್ಟ ಕಂದಮ್ಮಗಳ ಆಶಾಕಿರಣವಾಗಿದೆ.

2005ರಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಯಾವುದೇ ಕಟ್ಟಡವನ್ನು ಹೊಂದಿರಲಿಲ್ಲ. ಆಗ ಅಲ್ಲಿನ ಗುಡಿಸಲುಗಳಲ್ಲಿ ಪಾಠಪ್ರವಚನ ನಡೆಯುತ್ತಿತ್ತು. ತದನಂತರ ಶಾಲಾಕಟ್ಟಡ ನಿರ್ಮಾಣವಾಗಿ ಬೋಧನೆ ಶಾಲಾ ಕೊಠಡಿಗಳಲ್ಲಿ ನಡೆಸಲಾಯಿತು.

ಪ್ರಾರಂಭದ ದಿನಗಳಲ್ಲಿ ಸಾಕಷ್ಟು ಸಮಸ್ಯೆಗಳು ಇದ್ದವು. ಮುಖ್ಯವಾಗಿ ಶಾಲೆಗೆ ಅಗತ್ಯವಾಗಿ ಬೇಕಾದ ಭೌತಿಕ ಸೌಲಭ್ಯಗಳ ಕೊರತೆ ಇತ್ತು, ಮಕ್ಕಳ ಕಲಿಕೆಯಲ್ಲಿ ಭಾಷಾ ಸಮಸ್ಯೆ ಹಾಗೂ ಪೋಷಕರ ನಿರುತ್ಸಾಹ ಇತ್ಯಾದಿ ಹತ್ತು ಹಲವು ಸಮಸ್ಯೆಗಳಿದ್ದವು. ತದನಂತರದ ದಿನಗಳಲ್ಲಿ ಹಂತಹಂತವಾಗಿ ಬದಲಾವಣೆಗೊಳ್ಳುತ್ತಾ, ತಾಲೂಕು ಹಂತದಲ್ಲಿ ಒಂದು ಉತ್ತಮ ಶಾಲೆಯಾಗಿ ಗುರುತಿಸಿಕೊಂಡಿದೆ. 2018-19 ನೇ ಸಾಲಿನ ಭದ್ರಾವತಿ ತಾಲೂಕಿನ ಅತ್ಯುತ್ತಮ ನಲಿ-ಕಲಿ ಶಾಲಾ ಪುರಸ್ಕಾರಕ್ಕೆ ಭಾಜನವಾಗಿದೆ.

**ಇಂದು ಈ ಶಾಲೆಯ ವಿಶೇಷತೆಗಳನ್ನು ಈ ಕೆಳಗಿನಂತೆ ಎಳೆ-ಎಳೆಯಾಹಂಚಿಕೊಳ್ಳುವ ಹಂಬಲದೊಂದಿಗೆ......**




- **ಶಾಲಾ ಕೈತೋಟ** :- ಈ ಶಾಲೆಯನ್ನು ಪ್ರವೇಶಿಸುತ್ತಿದ್ದಂತೆ ಹಚ್ಚಹಸುರಿನ ಸುಂದರ ಕೈತೋಟ ಕಂಗೊಳಿಸುತ್ತಿದ್ದು,ಹೂ-ಗಿಡಗಳು ಶಾಲೆಗೆ ಬರುವವರನ್ನು ಸ್ವಾಗತಕೋರುವಂತೆ ಭಾಸವಾಗುತ್ತದೆ. ಈ ಕೈತೋಟವು ಚಿಕ್ಕದಾಗಿ ಚೊಕ್ಕವಾಗಿ ಮತ್ತು ಅಚ್ಚುಕಟ್ಟಾಗಿ ನಿರ್ಮಾಣವಾಗಿದೆ. ಇಲ್ಲಿ ವಿವಿಧ ರೀತಿಯ ಹೂ-ಗಿಡಗಳು, ಅಲಂಕಾರಿಕ ಗಿಡಗಳು, ಬಾಳೆ, ಪೇರಲೆ,

ನುಗ್ಗೆ, ತುಳಸಿ, ಬಸಳೆ, ದಾಸವಾಳ ಗಿಡಗಳನ್ನು ಸಮೃದ್ಧವಾಗಿ ಬೆಳೆಸಿದ್ದು ಪರಿಸರ ಕಾಳಜಿಯನ್ನು ಎದ್ದು ತೋರಿಸುತ್ತದೆ. ಇದನ್ನು ಶಾಲಾ ಸಿಬ್ಬಂದಿ ಮತ್ತು ಮಕ್ಕಳು ಅತ್ಯಂತ ಕಾಳಜಿಯಿಂದ ರೂಪಿಸಿರುತ್ತಾರೆ. ಆಕರ್ಷಕ ಕೈತೋಟ ಶಾಲೆಯ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ.

**ಸುಸಜ್ಜಿತ ನಲಿ-ಕಲಿ ಕೊಠಡಿ :-** ಈ ಶಾಲೆಯ ನಲಿಕಲಿ ಕೊಠಡಿ ಸೃಜನಾತ್ಮಕತೆಯಿಂದ ಕೂಡಿದೆ.ನಲಿ-ಕಲಿ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಹವಾಮಾನ ಗಡಿಯಾರ ನಮ್ಮನ್ನು ಸ್ವಾಗತಿಸುತ್ತದೆ. ಇದು ಗಡಿಯಾರದ ರೀತಿಯಲ್ಲಿದ್ದು ಹವಾಮಾನದ ಆರು ಅಂಶಗಳನ್ನು ಗಡಿಯಾರದ ಚಲನೆ ಯಂತೆ ಮಕ್ಕಳು ಮಾನಕವನ್ನು ಗಡಿಯಾರದಲ್ಲಿ ಗುರುತಿಸಿ, ನಂತರ ಹವಾಮಾನ ನಕ್ಷೆಯಲ್ಲಿ ಅಂದಿನ ದಿನದ ಹವಾಮಾನವನ್ನು ದಾಖಲಿಸುತ್ತಾರೆ.






- **ವಾಲ್ ಸ್ಲೇಟ್:-** ಈ ಶಾಲೆಯ ವಾಲ್ ಸ್ಲೇಟ್ ರೈಲಿನ ಮಾದರಿಯಲ್ಲಿದೆ. ಇದನ್ನು ನಲಿ-ಕಲಿ ಎಕ್ಸ್‌ಪ್ರೆಸ್ ಎಂದು ಗುರುತಿಸಿದ್ದು,ಪ್ರತಿ ಬೋಗಿಯು ಮಗುವಿನ ವೈಯಕ್ತಿಕ ಕಪ್ಪುಹಲಗೆ ಯಾಗಿದೆ. ಇದನ್ನು ಮಕ್ಕಳ ಬರವಣಿಗೆಯ ಅಭಿವೃದ್ಧಿಗೆ ಪೂರಕ ಸ್ಥಳವಕಾಶವಾಗಿ ಬಳಕೆ ಮಾಡಿಕೊಳ್ಳುವುದು ಕಂಡುಬಂದಿದೆ.







**ಕಾರ್ಡ್‌ಗಳ ಜೋಡಣೆ :-** ಈ ಶಾಲೆಯಲ್ಲಿ ಮಕ್ಕಳ ಕಲಿಕಾ ಕಾರ್ಡ್‌ಗಳನ್ನು ಮರದ ರ್‍ಯಾಕ್‌ನಲ್ಲಿ ತರಗತಿವಾರು ಮತ್ತು ವಿಷಯವಾರು ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಇದರಿಂದ ಮಕ್ಕಳು ಸುಲಭವಾಗಿ ತಾವೇ ಕಲಿಕಾ ಕಾರ್ಡ್ ತೆಗೆದುಕೊಂಡು ಕಲಿಯಲು ಅನುಕೂಲವಾಗಿದೆ. ಇದರಮೇಲೆ ಕಲಿಕಾ ಸಾಮಗ್ರಿಗಳನ್ನು ಮಕ್ಕಳ ಕೈಗೆಟುಕುವಂತೆ ಮೈಲಿಗಲ್ಲು ವಾರು ಮತ್ತು ಮೆಟ್ಟಿಲುವಾರು ಜೋಡಿಸಿದ್ದು ಇದು ಮಕ್ಕಳಿಗೆ ಸುಲಭವಾಗಿ ಕಾರ್ಡ್ ನೊಂದಿಗೆ ಕಲಿಕಾ ಸಾಮಗ್ರಿಗಳನ್ನು ತೆಗೆದುಕೊಂಡು ಕಲಿಕೆಯಲ್ಲಿ ತೊಡಗಲು ನೆರವಾಗಿದೆ.

**ಕಲಿಕಾ ಚಪ್ಪರ :–** ಇಲ್ಲಿನ ಕಲಿಕಾ ಚಪ್ಪರವು ಅತ್ಯಂತ ಆಕರ್ಷಣೀಯ ವಾಗಿದೆ. ಇದು ಸಂಪೂರ್ಣವಾಗಿ ಮಕ್ಕಳಿಂದ ತಯಾರಿಸಿದ ಕ್ರಾಫ್ಟ್ ಚಟುವಟಿಕೆ ಗಳಿಂದ ಕೂಡಿದ್ದು, ಮಕ್ಕಳ ಪ್ರತಿಭೆ ಅನಾವರಣವಾಗಿರುವುದನ್ನು ಕಲಿಕಾ ಚಪ್ಪರದಲ್ಲಿ ಕಾಣಬಹುದು.





**ಕಲಿಕಾ ತಟ್ಟೆ :–** ಸ್ವ–ವೇಗದ ಕಲಿಕೆಗೆ ಪೂರಕವಾಗಿ ನಲಿ–ಕಲಿ ಕೊಠಡಿಯ ನೆಲದ ಮೇಲೆ ಆರು ಗುಂಪುಗಳನ್ನು ಪ್ರತಿಬಿಂಬಿಸುವಂತೆ ಕಲಿಕಾ ತಟ್ಟೆಗಳನ್ನು ಚಿತ್ರಿಸಲಾಗಿದೆ. ಸಾಮೂಹಿಕ ಗುಂಪಿಗೆ ಮರ, ಉಳಿದಂತೆ 4 ತಟ್ಟೆಗಳನ್ನು ಎಲೆ ಮತ್ತು ಹೂಗಳಿಂದ, ಮೌಲ್ಯಮಾಪನದ ತಟ್ಟೆಯನ್ನು ಹಣ್ಣಿನಿಂದ ಗುರುತಿಸಲಾಗಿದ್ದು ಅತ್ಯಂತ ಆಕರ್ಷಣೀಯವಾಗಿದೆ.

**ಯೋಜನೆಗಳು :–** ಈ ಶಾಲೆಯಲ್ಲಿ ನಲಿ–ಕಲಿ 1,2,3 ನೇ ತರಗತಿ ಎಲ್ಲಾ ಯೋಜನೆಗಳನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ಪ್ರತಿವರ್ಷವೂ ಮಾಡಿ, ಅವುಗಳನ್ನು ಒಂದೆಡೆ ವ್ಯವಸ್ಥಿತ ವಾಗಿ ಜೋಡಿಸಿರುವುದು ಕಂಡುಬರುತ್ತದೆ. ಅದೇ ರೀತಿ ಭಾಷಾ ವಿಷಯಗಳ ಕಲಿಕೆಗೆ ಹಲವಾರು ಪಾಠೋಪಕರಣ ಗಳನ್ನು ತಯಾರಿಸಿ ಬಳಸ ಲಾಗಿದೆ ವಿಶೇಷವಾಗಿ ಇಂಗ್ಲಿಷ್ ಭಾಷಾ ಕಲಿಕೆಗೆ ಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡ ಚಾರ್ಟ್ಸ್‌ಗಳನ್ನು ನಲಿ–ಕಲಿ ಕೊಠಡಿಯ ಗೋಡೆಗಳ ಮೇಲೆ ತೂಗು ಹಾಕಲಾಗಿದ್ದು, ಇದರಿಂದ ಮಕ್ಕಳು ನೋಡಿ ಕಲಿಯಲು ಅನುಕೂಲವಾಗಿದೆ. ಮಕ್ಕಳ ಪ್ಯಾನಲ್ ಬೋರ್ಡ್‌ನಲ್ಲಿ ಅವರು ಬರೆದ ಮತ್ತು ಮಾಡಿದ ಕ್ರಾಫ್ಟ್‌ಗಳನ್ನು ಹಾಕಿರುವುದು ಕಂಡುಬರುತ್ತದೆ. ಜೊತೆಗೆ ಮಕ್ಕಳ ಅಭ್ಯಾಸ ಪುಸ್ತಕಗಳು ಮತ್ತು ಸಿ.ಪಿ.ಎಫ್‌ಗಳನ್ನು ವಿಷಯವಾರು ಜೋಡಿಸಿ ರುವುದನ್ನು ಕಾಣಬಹುದು. ಒಟ್ಟಾರೆ ಹೇಳುವುದಾದರೆ ನಲಿ–ಕಲಿ ಕೊಠಡಿ ಸೃಜನ ಶೀಲತೆಯಿಂದ ಕೂಡಿದ ಪಾಠೋಪ ಕರಣಗಳನ್ನು ಒಳಗೊಂಡಿದೆ, ಇದು ಮಕ್ಕಳ ಕಲಿಕಗೆ ಪ್ರೋತ್ಸಾಹಿಸುವ ವಾತಾವರಣವನ್ನು ಸೃಷ್ಟಿಸಿದೆ.





**ಪೊಪೆಟ್ ಶೋ :–** ಮಕ್ಕಳಿಗೆ ಗೊಂಬೆಗಳೆಂದರೆ ತುಂಬಾ ಇಷ್ಟ, ಅವುಗಳನ್ನೇ ಬಳಸಿಕೊಂಡು ಕಲಿಸುವುದರಿಂದ ಕಲಿಕೆ ಗಟ್ಟಿಯಾಗುತ್ತದೆ. ಅದಕ್ಕಾಗಿ ಭಾಷೆ ಮತ್ತು ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ಪೊಪೆಟ್ ಶೋ ಮೂಲಕ ಕಲಿಕೆ ಮಾಡಲಾಗುತ್ತಿದೆ. ಇದಕ್ಕಾಗಿ ಪೊಪೆಟ್ ಸ್ಟ್ಯಾಂಡ್ ಮತ್ತು ಪೊಪೆಟ್‌ಗಳನ್ನು ತಯಾರಿಸಿ ಕೊಂಡು ಕಲಿಕೆ ಮಾಡಿಸ ಲಾಗುತ್ತಿದೆ.

ಮೇಲಿನ ಎಲ್ಲಾ ಅಂಶಗಳನ್ನು ಬಳಸಿಕೊಂಡು ಈ ಶಾಲೆಯು ನಲಿಕಲಿ ಬೋಧನಾ ವಿಧಾನವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವುದನ್ನು ಕಾಣಬಹುದು.

**ಕಲಿ–ನಲಿ ಕೊಠಡಿ :–** ಈ ಶಾಲೆಯ ಇನ್ನೊಂದು ಕೊಠಡಿಯಲ್ಲಿ ನಾಲ್ಕು ಮತ್ತು ಐದನೇ ತರಗತಿಯನ್ನು ನಿರ್ವಹಿಸಲಾಗುತ್ತಿದೆ. ಇಲ್ಲಿಯೂ ಸಹ ಆಕರ್ಷಕವಾದ ಕಲಿಕಾ ವಾತಾವರಣವಿದೆ.ಗೋಡೆಗಳ ಮೇಲೆ ಕಲಿಕಾ–ಪಾಠೋಪಕರಣಗಳ ಜೋಡಣೆಯನ್ನು ಕಾಣಬಹುದು. ಓದುವ ಮೂಲೆಯಲ್ಲಿ ಪುಸ್ತಕಗಳನ್ನು ಅನಾವರಣಗೊಳಿಸಲಾಗಿದೆ. ಅವುಗಳನ್ನು ಪ್ರತಿದಿನ ಒಂದು ಮಗು ಪ್ರಾರ್ಥನೆ ಸಮಯದಲ್ಲಿ ಒಂದೊಂದು ಪುಸ್ತಕ ಪರಿಚಯ ಮಾಡುವ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಯೂ ಸಹ ವಾಲ್‌ಸ್ಲೇಟನ್ನು ಸೇಬುಹಣ್ಣಿನ ಮಾದರಿಯಲ್ಲಿ ರೂಪಿಸಲಾಗಿದೆ. ಇದನ್ನು ಮಕ್ಕಳು ಯತೇಚ್ಛವಾಗಿ ಬಳಸುವ ಮೂಲಕ ಬರವಣಿಗೆಯಲ್ಲಿ ಪ್ರಗತಿ ಆಗಿರುವುದನ್ನು ಗಮನಿಸಬಹುದು.






ವಿಶೇಷವಾಗಿ ಇಲ್ಲಿ ಇಂಗ್ಲಿಷ್ ಕಾರ್ನರ್ ಕಾಣಬಹುದು. ಇದರಲ್ಲಿ ENGLISH PHONIC WORDS BOOKS,RHYMES BOOKS, CHARTS, TLMಗಳನ್ನು ಕಾಣಬಹುದು. ಜೊತೆಗೆ ನಾಲ್ಕು ಮತ್ತು ಐದನೇ ತರಗತಿಯ ವಿಷಯವಾರು ಪಾಠೋಪಕರಣಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಇದರಿಂದ ಮಕ್ಕಳು ನೋಡಿ ಕಲಿಯಲು ಈ ಅಂಶಗಳು ಕಾರಣವಾಗಿವೆ. ಇದರ ಜೊತೆಗೆ ಮಕ್ಕಳ ಫೈಲ್ಗಳ ಜೋಡಣೆಯನ್ನು ಕಾಣಬಹುದು. ಇಲ್ಲಿಯೇ ಮಕ್ಕಳ ಓದುವ ಆಸಕ್ತಿಯನ್ನು ಹೆಚ್ಚಿಸಲು ಹಳೆಯ ವಾಚಕಗಳು, ವಿವಿಧ ಕಥೆ ಪುಸ್ತಕಗಳನ್ನು ಒಂದೆಡೆ ಇಡಲಾಗಿದ್ದು, ಬಿಡುವಿನ ಸಮಯದಲ್ಲಿ ಮಕ್ಕಳಿಗೆ ಓದಲು ನೀಡುತ್ತಿರುವುದನ್ನು ಕಾಣಬಹುದು.

ಒಟ್ಟಾರೆ ಹೇಳುವುದಾದರೆ ಈ ಶಾಲೆಯ ಭೌತಿಕ ಮತ್ತು ಕಲಿಕಾ ಪರಿಸರ ಸುಂದರ ಮತ್ತು ಆಕರ್ಷಣೀಯವಾಗಿದೆ.

ಹಿಂದೆ ಹಲವಾರು ಕುಂದುಕೊರತೆಗಳಿಂದ ಕೂಡಿದ ಶಾಲೆ ಇಂದು ಎಲ್ಲಾ ವ್ಯವಸ್ಥೆಯನ್ನು ಹೊಂದಲು ಇಲ್ಲಿನ ಶಿಕ್ಷಕಿಯರು ಮತ್ತು ಸಿಬ್ಬಂದಿ ವರ್ಗ ಸಾಕಷ್ಟು ಶ್ರಮ ವಹಿಸಿದೆ.ಇದರ ಫಲವೇ ಇಂದು ಈ ಶಾಲೆ ಭದ್ರಾವತಿ ತಾಲೂಕಿನಲ್ಲಿ ಗುರುತಿಸಿಕೊಳ್ಳಲು ಕಾರಣವಾಗಿದೆ.